ಸಿ.ಸಿ.ನಂಃ 8064/2018

ಚಾಸಾಃ 9, ಪ್ರಾಸಾಃ 3

# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು ನಗರ

ಸಿ.ಸಿ.ನಂಃ 8064/2018

ಚಾಸಾಃ 9, ಪ್ರಾಸಾಃ 3

| | |
|---|---|
| ಸಾಕ್ಷಿದಾರರ ಹೆಸರುಃ | ಡಾಕ್ಟರ್ ಬೆಟ್ಟಿ ಆಲ್ಬೇನ್ |
| ಗಂಡನ ಹೆಸರುಃ | ಡಾಕ್ಟರ್ ಆಲ್ಬೇನ್ ಎಸ್ |
| ವಯಸ್ಸುಃ | 54 ವರ್ಷ |
| ಉದ್ಯೋಗಃ | ಸಿನಿಯರ್ ಸಿ.ಎಂ.ಓ ಸೆಂಟ್ ಜಾನ್ಸ್ ಆಸ್ಪತ್ರೆ |
| ವಾಸಃ | ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು |

**ದಿನಾಂಕಃ 10-09-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ ಹಿರಿಯ ಸ.ಸ.ಅ ಅವರಿಂದಃ-**

1. ನಾನು 2019 ರಿಂದ ಇಲ್ಲಿಯವರೆಗೆ ಸೆಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಸಿನಿಯರ್ ಸಿ.ಎಂ.ಓ ಆಗಿ ಕೆಲಸ ಮಾಡಿರುತ್ತೇನೆ.
2. ದಿನಾಂಕಃ13-08-2017 ರಂದು ರಾತ್ರಿ 10.40 ರ ಸಮಯದಲ್ಲಿ ಸತೀಶ್ ಎಂಬ ಗಾಯಳು ತನ್ನ ತಂದೆ ರಾಮಯ್ಯ ಎನ್ನುವವರ ಜೊತೆಯಲ್ಲಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿದ್ದರು. ಅವರಿಗೆ ಗಾಯಗಳು ಗೊತ್ತಿರುವ ವ್ಯಕ್ತಿಯಿಂದ ಹಲ್ಲೆಯಾದ ಕಾರಣಕ್ಕೆ ಆಗಿರುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ಘಟನೆಯು ಅದೇ ದಿನ ರಾತ್ರಿ

9.40 ಕ್ಕೆ ಬಿ.ಟಿ.ಎಂ ಲೇಔಟ್, ತಾವರೆಕೆರೆಯಲ್ಲಿ ಆಗಿರುತ್ತದೆ ಎಂದು ತಿಳಿಸಿರುತ್ತಾರೆ.

3. ಸದರಿ ಗಾಯಳುವಿಗೆ ಎಡಭಾಗದ ಪೃಷ್ಠದ ಮೇಲೆ 3x3x4 ಸೆಂಟಿಮೀಟರ್ ಅಳತೆಯ ಚುಚ್ಚಿದಂತಹ ಗಾಯ ಕಂಡು ಬಂದಿದ್ದು, ರಕ್ತಸ್ರಾವ ಆಗುತ್ತಿತ್ತು. ಗಾಯಳುವಿಗೆ ಶಸ್ತ್ರ ಚಿಕಿತ್ಸಾ ಕೊಠಡಿಯಲ್ಲಿ ವಿವರವಾದ ಪರೀಕ್ಷೆ ಮತ್ತು ಚಿಕಿತ್ಸೆ ಒಳಗಾಗುವಂತೆ ಸೂಚಿಸಲಾಗಿತ್ತು. ಆದರೆ ಗಾಯಳುವಿನ ತಂದೆ ಗಾಯಳುವನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಇಚ್ಛೆ ವ್ಯಕ್ತಪಡಿಸಿರುತ್ತಾರೆ. ಗಾಯಳುವಿಗೆ ಅಗತ್ಯವಿದ್ದ ಪ್ರಥಮ ಚಿಕಿತ್ಸೆಯನ್ನು ನೀಡಿ ತುರ್ತು ಚಿಕಿತ್ಸಾ ಘಟಕದಿಂದ ಕಳುಹಿಸಲಾಗಿತ್ತು.

4. ನನ್ನ ಅಭಿಪ್ರಾಯದಂತೆ ಸದರಿ ಗಾಯವು ತೀವ್ರ ಸ್ವರೂಪದ್ದಾಗಿದ್ದು, ನಾನು ನೋಡಿದ ಸಮಯದಲ್ಲಿ ಗಾಯವು ಹೊಸದಾಗಿರುತ್ತದೆ. ಗಾಯಳುವನ್ನು ಪರೀಕ್ಷಿಸಿದ ಬಗ್ಗೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ಗಾಯದ ಪ್ರಮಾಣ ಪತ್ರದ ಮೇಲಿರುವ ತನ್ನ ಸಹಿಯನ್ನುನೋಡಿ ಗುರುತಿಸಿದ್ದಾರೆ. ಆದ್ದರಿಂದ ಗಾಯದ ಪ್ರಮಾಣ ಪತ್ರವನ್ನು **ನಿಪಿ-2** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-2(ಎ)** ಎಂದು ಗುರುತಿಸಲಾಯಿತು.

5. ಗಾಯಳುವಿಗೆ ತುಂಬಾ ರಕ್ತಸ್ರಾವ ಆಗಿದ್ದು, ಗಾಯಳು ಆಸ್ಪತ್ರೆಗೆ ಬಂದಾಗ ಆತನ ಬಿ.ಪಿ ಕಡಿಮೆ ಇದ್ದು, ಸದರಿ ಗಾಯಕ್ಕೆ ಚಿಕಿತ್ಸೆ ನೀಡಿದ ನಂತರವೂ ಗಾಯಳು ಸುಮಾರು 20 ದಿನಗಳ ಕಾಲ ನೋವು ಅನುಭವಿಸಬೇಕಾಗುತ್ತದೆ ಹಾಗೂ ದಿನನಿತ್ಯದ ನಿತ್ಯ ಕರ್ಮಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ ಸದರಿ ಗಾಯವನ್ನು ತೀವ್ರ ಸ್ವರೂಪದ ಗಾಯ ಎಂದು ಅಭಿಪ್ರಾಯಪಟ್ಟಿರುತ್ತೇನೆ.

<u>ಪಾಟೀಸವಾಲು ಆರೋಪಿ ಪರ ವಕೀಲರಿಂದಃ-</u>

6. ಗಾಯಳು ಆಸ್ಪತ್ರೆಗೆ ಬಂದ ನಂತರ ಎಷ್ಟು ಸಮಯದವರೆಗೆ ಚಿಕಿತ್ಸೆ ನೀಡಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಸರಿಯಾಗಿ ನೆನಪಿಲ್ಲ, ಆದರೆ ಸುಮಾರು 3 ಗಂಟೆಗಳ ಕಾಲ ಚಿಕಿತ್ಸೆ ನೀಡಿರಬಹುದು ಎಂದು ಹೇಳುತ್ತಾರೆ. ಗಾಯಳುವಿಗೆ ಚಿಕಿತ್ಸೆ ನೀಡುವಾಗ ನನ್ನ ಜೊತೆಯಲ್ಲಿ ವೈದ್ಯರ ತಂಡ ಇತ್ತು. ನನ್ನ ಜೊತೆಯಲ್ಲಿ ಚಿಕಿತ್ಸೆ ನೀಡಿದ್ದ ವೈದ್ಯರ ಹೆಸರನ್ನು ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ.

7. ಗಾಯಳುವಿನ ದಾಖಲಾತಿಯನ್ನು ತುರ್ತು ಚಿಕಿತ್ಸಾ ಘಟಕದ ದಾಖಲಾತಿ ಕೌಂಟರ್ ಮತ್ತು ಅಟೆಂಡರ್ ಮಾಡಿರುತ್ತಾರೆ. ಅದಕ್ಕೆ ಸಂಬಂಧಿಸಿದ ದಾಖಲೆಗಳು ಆಸ್ಪತ್ರೆಯಲ್ಲಿ ಇರುತ್ತವೆ. ಪೊಲೀಸರ ಮಾತುಕೇಳಿ ನಿಪಿ-2 ಗಾಯದ ಪ್ರಮಾಣ ಪತ್ರ

ನೀಡಿದ್ದೇನೆ ಎಂದರೆ ಸರಿಯಲ್ಲ. ಗಾಯಳುವಿಗೆ ತೀವ್ರ ಸ್ವರೂಪದ ಗಾಯ ಆಗದೆ ಇದ್ದರೂ ಸಹ ಪೊಲೀಸರ ಮಾತುಕೇಳಿ ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ.

8. ದಿನಾಂಕಃ13-08-2017 ರಂದು ನಾನು ಚಾಸಾ-1 ರವರಿಗೆ ಚಿಕಿತ್ಸೆ ನೀಡಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

(ರಂಗೇಗೌಡ ಸಿ)

ಮು. ಮ. ದಂ. ನ್ಯಾ ಬೆಂ. ನಗರ.